ಇ) ಪಾದಚಾರಿಗಳ ಪಥದ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿದ್ದು ವೃತ್ತಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು.

ಈ) ಪಾದಚಾರಿಗಳು ಪುಟ್‌ಪಾತ್‌ನಿಂದ ಮುಖ್ಯ ರಸ್ತೆಗೆ ಇಳಿಯದ ಹಾಗೆ ಬ್ಯಾರಿಕೇಡ್‌ಅನ್ನು ಅಳವಡಿಸುವ ಬಗ್ಗೆ "ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ" ನಿರ್ಧರಿಸಬೇಕಾಗುವುದು.

ಉ) "ಈ" ದಲ್ಲಿ ತಿಳಿಸಿರುವಂತೆ.

ಧಾರವಾಡ ಹೊರವಲಯದ ನಬಾರ್ಡ್ ರಸ್ತೆ

4291(5095) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅಮರಗೋಳ ಮಾರುಕಟ್ಟೆಯ ಸಂಪರ್ಕ ಮಾಡುವ ಧಾರವಾಡದ ಹೊರವಲಯದ ನಬಾರ್ಡ್ ರಸ್ತೆ ಅಮರಗೋಳ – ಸವದತ್ತಿ ಕಾಮಗಾರಿ ಪ್ರಾರಂಭವಾಗಿದೆಯೇ ;

ಆ) ಸದರಿ ರಸ್ತೆಯ ಕಾಮಗಾರಿಗೆ ನಬಾರ್ಡ್ ಹಣ ಖರ್ಚು ಮಾಡಲಾಗಿದೆಯೇ ; ಹಾಗಿದ್ದಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ;

ಇ) ಸವದತ್ತಿ ಮಾರ್ಗದಿಂದ ಅಮರಗೋಳ – ಹುಬ್ಬಳ್ಳಿ ಸಂಪರ್ಕಿಸುವ ಮಾರ್ಗದ ಅವಶ್ಯಕತೆ ಇರುವುದು ಸರ್ಕಾರ ಗಮನಿಸಿದೆಯೇ ; ಇದರ ಪ್ರಮುಖವಾದ ಮಹತ್ವಗಳೇನು ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಅಮರಗೋಳದಿಂದ ಅಮೀನಬಾವಿಗೆ ಸಂಪರ್ಕ ಕಲ್ಪಿಸುವ ಗ್ರಾಮೀಣ ರಸ್ತೆಯ ಪ್ರಥಮ ಹಂತದ 2.25 ಕಿಮೀ ನಿಂದ 9.0 ರವರೆಗಿನ ಅಭಿವೃದ್ಧಿ ಕಾಮಗಾರಿ ಪ್ರಾರಂಭವಾಗಿದ್ದು ಕೆಲಸ ಪ್ರಗತಿಯಲ್ಲಿದೆ.

ಆ) ಈ ಯೋಜನೆಯಡಿ ಮೊದಲಿಗೆ ರಾಜ್ಯ ಸರ್ಕಾರದಿಂದ ವೆಚ್ಚ ಮಾಡಿ ನಂತರ ನಬಾರ್ಡ್‌ನಿಂದ ಈ ವೆಚ್ಚದ ಶೇಕಡ 90 ರಷ್ಟು ಮೊತ್ತವನ್ನು ಸಾಲವಾಗಿ ಪಡೆಯಬೇಕಿದೆ. ಜೂನ್ 2003ರ ಅಂತ್ಯದವರೆಗೆ 57 ಲಕ್ಷ ರೂ. ವೆಚ್ಚ ಮಾಡಲಾಗಿದೆ.

ಇ) ಈ ರಸ್ತೆಯು ಅಮರಗೋಳದಲ್ಲಿರುವ ಎಪಿಎಂಸಿ ಮಾರ್ಕೆಟ್ ಯಾರ್ಡ್‌ಗೆ ಸಂಪರ್ಕ ಕಲ್ಪಿಸುವುದು. ಈ ರಸ್ತೆಯ ಸುಧಾರಣೆಯಿಂದ ಧಾರವಾಡ – ವಿಜಾಪುರ ರಾಜ್ಯ ಹೆದ್ದಾರಿ ಮೇಲಿಯವ ಅಮ್ಮಿನಭಾವಿಯಿಂದ ಅಮರಗೋಳ ಹಾಗೂ ಹುಬ್ಬಳ್ಳಿ ನಗರಕ್ಕೆ ನೇರ ಸಂಪರ್ಕ ಕಲ್ಪಿಸಿದಂತಾಗಿ 12 ಕಿಮೀ ದೂರ ಕಡಿಮೆಯಾಗುವುದು ಧಾರವಾಡ ಮತ್ತು ನವಲಗುಂದ ತಾಲ್ಲೂಕಿನ ಒಟ್ಟು 26 ಹಳ್ಳಿಗಳ ಜನರಿಗೆ ಸಂಪರ್ಕ ರಸ್ತೆಯ ಅನುಕೂಲ ಕಲ್ಪಿಸಿಕೊಟ್ಟಂತಾಗುವುದು.

ಅಂಕೋಲ – ಗುತ್ತಿ (ಬಳ್ಳಾರಿ) ರಾಷ್ಟ್ರೀಯ ಹೆದ್ದಾರಿ ನಿರ್ಮಾಣ

4292(5096) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅಂಕೋಲಾ – ಗುತ್ತಿ (ಬಳ್ಳಾರಿ) ರಾಷ್ಟ್ರೀಯ ಹೆದ್ದಾರಿ ಹುಬ್ಬಳ್ಳಿ ಹೊರಗಿನ (ರಿಂಗ್) ರಸ್ತೆ ಮಾರ್ಗ ರಚಿಸುವುದು ಯಾವ ಹಂತದಲ್ಲಿದೆ ;

ಆ) ಅದರಂತೆ ಹುಬ್ಬಳ್ಳಿ – ಬಿಜಾಪುರ ರಾಷ್ಟ್ರೀಯ ಹೆದ್ದಾರಿ ಕಾಚಮಗಾರಿಗೆ ಕಾಲಮಿತಿ ಇದೆಯೇ ; ರಾಷ್ಟ್ರೀಯ ಹೆದ್ದಾರಿ – 4 ಮೂಲಕ ಗುತ್ತಿ ಮತ್ತು ಬಿಜಾಪುರದ ಸಂಪರ್ಕ, ಅಮರಗೋಳ